# ಜ್ಯೋತಿ ಬೆಳಗುತಿದೆ, ಪರಂಜ್ಯೋತಿ ಬೆಳಗುತಿದೆ - ೧

## (ಬೃಹದಾರಣ್ಯಕೋಪನಿಷತ್ತು - ೪)

ಸ್ವಾಮಿ ವೀರೇಶಾನಂದ

ಇದು ಬೃಹದಾರಣ್ಯಕ ಉಪನಿಷತ್ತಿನಲ್ಲಿಯೇ ಬರುವ ಇನ್ನೊಂದು ಪ್ರಸಂಗ. ಜನಕನ ಬಳಿಗೆ ಯಾಜ್ಞವಲ್ಕ್ಯನು ಬರುತ್ತಾನೆ. ಈ ಬಾರಿ ಅವನು ಉಪದೇಶಮಾಡಲಿಕ್ಕೆ ಬಂದವನಲ್ಲ. ತನ್ನ ಕುಟುಂಬದ ನಿರ್ವಹಣೆಗಾಗಿ ಏನಾದರೂ ಯಾಚಿಸಲು ಬಂದವನು. ಜನಕರಾಜನೇ ಅವನನ್ನು ಮಾತಿಗೆ ಎಳೆದನು. ಅವನ ಮಾತಿಗೆ ಒಂದು ಹಿನ್ನೆಲೆ ಇದೆ. ಅದನ್ನು ನೋಡೋಣ. ಹಿಂದೆ ಜನಕನೂ ಯಾಜ್ಞವಲ್ಕ್ಯನೂ ಅಗ್ನಿಹೋತ್ರದ ಸಂಬಂಧವಾಗಿ ಮಾತುಕತೆಯಾಡಿದ್ದರು. ಆಗ ಯಾಜ್ಞವಲ್ಕ್ಯನಿಗೆ ಜನಕನು ಅಗ್ನಿಹೋತ್ರದ ಸಂಬಂಧವಾಗಿ ಉಪದೇಶವನ್ನು ಮಾಡಿದ್ದನು. ಇದರಿಂದ ಯಾಜ್ಞವಲ್ಕ್ಯನಿಗೆ ಸಂತೋಷವಾಯಿತು. ''ಏನಾದರೂ ವರವನ್ನು ಕೇಳು'' ಎಂದು ಅವನು ಜನಕನಿಗೆ ಹೇಳಿದನು. ಅದಕ್ಕೆ ಜನಕನು ಕಾಮಪ್ರಶ್ನೆಯ ವರವನ್ನು ಕೇಳಿಕೊಂಡನು. ಕಾಮಪ್ರಶ್ನೆಯೆಂದರೆ, ತಕ್ಕಸಮಯದಲ್ಲಿ ಯಾವುದಾದರೂ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ನೀಡಿರುವ ಮುಕ್ತ ಅವಕಾಶ. ಯಾಜ್ಞವಲ್ಕ್ಯನು ಇದಕ್ಕೆ ಒಪ್ಪಿಕೊಂಡನು.

ಈಗ ಅದಕ್ಕೆ ಅವಕಾಶ ಒದಗಿಬಂದಿತ್ತು. ತನಗೆ ಕೊಟ್ಟ ವರವನ್ನು ಉಪಯೋಗಿಸಿಕೊಂಡ ಜನಕನು ಒಂದು ಪ್ರಶ್ನೆಯನ್ನು ಕೇಳಲು ಇಚ್ಛಿಸಿದನು. ಯಾಜ್ಞವಲ್ಕ್ಯನು ಇದಕ್ಕೆ ಸಮ್ಮತಿಸಿದನು. ಇವರಿಬ್ಬರ ಸಂಭಾಷಣೆಯು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಜ್ಯೋತಿರ್ಬ್ರಾಹ್ಮಣ ಎಂಬ ಹೆಸರಿನಲ್ಲಿ ಪ್ರಖ್ಯಾತವಾಗಿದೆ.

### ಯಾವುದು ಬೆಳಕು?

ಜನಕನು ಪ್ರಶ್ನಿಸಲು ಆರಂಭಿಸಿದನು: ''ಅಯ್ಯಾ ಯಾಜ್ಞವಲ್ಕ್ಯ, ಮನುಷ್ಯನಿಗೆ ವ್ಯವಹಾರ ಮಾಡಲು ಬೇಕಾದ ಬೆಳಕು ಯಾವುದು?'' ಯಾಜ್ಞವಲ್ಕ್ಯನು ಉತ್ತರಿಸಿದನು: ''ಸಾಮ್ರಾಟನೇ, ಒಬ್ಬ ವ್ಯಕ್ತಿಯು ಸೂರ್ಯನ ಬೆಳಕಿನಿಂದ ಎಲ್ಲ ಕೆಲಸಗಳನ್ನೂ ಮಾಡುತ್ತಾನೆ. ಅವನು ಆದಿತ್ಯನ ಜ್ಯೋತಿಯಿಂದಲೇ ಕುಳಿತುಕೊಳ್ಳುತ್ತಾನೆ; ಕೆಲಸ ಮಾಡಲು ಹೋಗುತ್ತಾನೆ; ಅಲ್ಲಿ ಹೋಗಿ ಕರ್ಮವನ್ನು ಮಾಡುತ್ತಾನೆ. ಕಡೆಗೆ ಸೂರ್ಯನ ಬೆಳಕಿನಲ್ಲಿಯೇ ಹಿಂತಿರುಗಿ ಬರುತ್ತಾನೆ.'' ಜನಕನು ಯಾಜ್ಞವಲ್ಕ್ಯನ ಮಾತನ್ನು ಒಪ್ಪಿಕೊಂಡನು.

ಇದು ನಮಗೆ ಗೊತ್ತೇ ಇದೆಯಲ್ಲ, ಇದರಲ್ಲಿ ವಿಶೇಷವೇನು? ಉಪನಿಷತ್ತು ಇಲ್ಲಿ ಒಂದು ಮುಖ್ಯವಿಷಯವನ್ನು ಹೇಳುತ್ತಿದೆ: ಜ್ಯೋತಿಯೆಂಬುದು ಯಾವತ್ತೂ ನಮ್ಮ ದೇಹ-ಮನಸ್ಸುಗಳಿಗಿಂತ ಭಿನ್ನವಾದುದು ಎಂದು. ಇಲ್ಲಿ ಜ್ಯೋತಿಯೆಂದರೆ ಬರಿಯ ಬೆಳಕಲ್ಲ. ಅರಿವು, ಅನುಭವ, ಚೈತನ್ಯ. ಚೈತನ್ಯವು ನಮ್ಮ ದೇಹಕ್ಕಿಂತ ಭಿನ್ನವಾದುದಲ್ಲ ಎಂದು ನಾಸ್ತಿಕರು ಹೇಳುತ್ತಾರೆ. ದೇಹದಿಂದಲೇ ಚೈತನ್ಯ ಮೂಡುತ್ತದೆ; ದೇಹ ಅಳಿದಾಗ ಅದೂ ಅಳಿಯುತ್ತದೆ ಎಂದವರ ಅಭಿಪ್ರಾಯ. ಆಧುನಿಕ ವಿಜ್ಞಾನವೂ ಇದನ್ನೇ ಹೇಳುತ್ತದೆ. ಆದರೆ ವೇದಾಂತ ಹೇಳುವುದು ಬೇರೆ. ಚೈತನ್ಯವು ದೇಹವ್ಯತಿರಿಕ್ತವಾದುದು ಎಂದು. ಹೀಗಾಗಿ ದೇಹವ್ಯತಿರಿಕ್ತವಾದ ಇತರೆ ಜ್ಯೋತಿಗಳ ಉದಾಹರಣೆಯನ್ನು ಮೊದಲು ತೆಗೆದುಕೊಳ್ಳಲಾಗಿದೆ. ಕಡೆಗೆ ನಿಜವಾದ ಜ್ಯೋತಿಯಾದ ಆತ್ಮ ಕೂಡ ಇದೇ ರೀತಿ, ದೇಹಕ್ಕೆ ವ್ಯತಿರಿಕ್ತವಾದುದು ಎಂದು ತೋರಿಸಲಾಗಿದೆ.

ಸಂವಾದ ಮುಂದುವರೆಯಿತು. ''ಅಯ್ಯಾ, ಯಾಜ್ಞವಲ್ಕ್ಯ, ಸೂರ್ಯನ ಬೆಳಕು ಇಲ್ಲದಾಗ ಒಬ್ಬ ವ್ಯಕ್ತಿಗೆ ಯಾವುದು ಬೆಳಕು?'' ಎಂದು ಕೇಳಿದನು ಜನಕ ಮಹಾರಾಜ. ''ಚಂದ್ರ'' ಎಂದನು ಯಾಜ್ಞವಲ್ಕ್ಯ. ''ಚಂದ್ರನ ಬೆಳಕಿನಲ್ಲಿಯೇ ಒಬ್ಬನು ಕುಳಿತುಕೊಳ್ಳುತ್ತಾನೆ; ಕೆಲಸಕ್ಕೆ ಹೋಗುತ್ತಾನೆ; ಕೆಲಸ ಮಾಡುತ್ತಾನೆ; ಮತ್ತೆ ಬರುತ್ತಾನೆ.''

''ಚಂದ್ರನ ಬೆಳಕೂ ಇಲ್ಲದಿದ್ದರೆ..?''

''ಅಗ್ನಿಯೇ ಬೆಳಕು.''

''ಅಗ್ನಿ ನಂದಿಹೋದಾಗ..?''

''ಜನಕ ಮಹಾರಾಜ, ಆಗ ಮಾತೇ ಬೆಳಕಾಗುತ್ತದೆ. ಕಡುಗತ್ತಲೆಯಲ್ಲಿಯೂ, ಮಾತಿನಿಂದಲೋ, ಮೂಸುವುದಿಂದಲೋ, ಶಬ್ದ ಕೇಳುವುದರಿಂದಲೋ, ಇಲ್ಲವೇ ಸ್ಪರ್ಶಿಸುವುದರಿಂದಲೂ ಒಬ್ಬನು ಅರಿವನ್ನು ಪಡೆದುಕೊಳ್ಳುತ್ತಾನಷ್ಟೆ! ಒಟ್ಟಾರೆ ಇಂದ್ರಿಯಗಳು ಒಬ್ಬ ವ್ಯಕ್ತಿಗೆ ಬೆಳಕಾಗಬಲ್ಲುವು. ಅಂಧಕಾರವಿದೆ ಎಂದುಕೋ. ಅಲ್ಲಿ ಒಬ್ಬನ ಕೈ ಕೂಡ ಅವನಿಗೆ ತಿಳಿದುಬರುವುದಿಲ್ಲ. ಆದರೆ ಅಲ್ಲಿ ಇಂದ್ರಿಯಗಳು ನಮಗೆ ಜ್ಞಾನವನ್ನು ನೀಡಬಲ್ಲುವು. ಅಲ್ಲವೆ?''

''ಹೌದು, ಹೌದು. ಆದರೆ, ಯಾಜ್ಞವಲ್ಕ್ಯನೇ, ಆದಿತ್ಯನು ಮುಳುಗಿದಾಗ, ಚಂದ್ರನು ಮುಳುಗಿದಾಗ, ಅಗ್ನಿಯೂ ಶಾಂತ

ವಾದಾಗ, ಇಂದ್ರಿಯಗಳೂ ಕೆಲಸಮಾಡದಿದ್ದಾಗ – ಒಬ್ಬ ವ್ಯಕ್ತಿಗೆ ಯಾವುದು ಜ್ಯೋತಿಯಾಗಬಲ್ಲದು?''

ಆಗ ಯಾಜ್ಞವಲ್ಕ್ಯನು ಹೇಳುತ್ತಾನೆ: ''ಅಯ್ಯಾ, ಜನಕನೇ, ಅಂಥ ಸಮಯದಲ್ಲಿ ಆತ್ಮನೇ ಜ್ಯೋತಿಯಾಗಿರುವನು. ಆತ್ಮನೆಂಬ ಜ್ಯೋತಿಯಿಂದಲೇ ಒಬ್ಬನು ಕುಳಿತಿರುತ್ತಾನೆ; ಹೋಗುತ್ತಾನೆ; ಕರ್ಮವನ್ನು ಮಾಡುತ್ತಾನೆ; ಹಾಗೂ ಕೆಲಸ ಮಾಡಿಕೊಂಡು, ಹಿಂದಕ್ಕೆ ಬರುತ್ತಾನೆ.''

ಇಲ್ಲಿ ಒಂದು ಪ್ರಶ್ನೆ ಏಳುತ್ತದೆ: ಬೇರೆ ಜ್ಯೋತಿಗಳು ಇಲ್ಲದಾಗ ಮಾತ್ರವೇ ಆತ್ಮ ಜ್ಯೋತಿಯರುವುದೆ? ಇದಕ್ಕೆ ಉತ್ತರ ಇಲ್ಲ. ಹಾಗೆ ನೋಡಿದರೆ, ಭೌತಿಕ ಜ್ಯೋತಿಗಳಾದ ಸೂರ್ಯ, ಚಂದ್ರ, ಅಗ್ನಿಗಳು ತೋರಿಸಿಕೊಡುವ ವಸ್ತುಗಳ ಅರಿವು ನಮಗೆ ಬರುವುದು ಆತ್ಮನಿಂದಲೇ. ಆತ್ಮನೇ ನಿಜವಾದ ಅರಿವು. ನಾವು ನೋಡುವಾಗ ಉಂಟಾಗುವ ಅರಿವು, ಕೇಳುವಾಗ ಉಂಟಾಗುವ ಅರಿವು — ಇವೆಲ್ಲವೂ ಆತ್ಮಚೈತನ್ಯದ ವಿವಿಧ ರೂಪಗಳಷ್ಟೇ. ಆತ್ಮವೇ ನಿಜವಾದ ಜ್ಯೋತಿ. ಈ ಆತ್ಮಜ್ಯೋತಿಯು ಉಳಿದ ಜ್ಯೋತಿಗಳಂತೆ ದೇಹ–ಇಂದ್ರಿಯ–ಮನಸ್ಸುಗಳಿಗೆ ಸೀಮಿತವಾದುದಲ್ಲ. ಅವುಗಳಿಗಿಂತ ಭಿನ್ನವಾದುದು. ದೇಹವೇ ನೋಡುವವನಾಗಿದ್ದರೆ, ಸತ್ತ ದೇಹವೂ ನೋಡಲು ಸಾಧ್ಯ; ಕೇಳಲು ಸಾಧ್ಯ. ಆದರೆ ಹಾಗೆ ಆಗುವುದೆ? ಇಲ್ಲ. ಹೀಗಾಗಿ ನಿಜವಾಗಿ ನೋಡುವವನು, ನಿಜವಾಗಿ ಕೇಳುವವನು, ನೈಜವಾದ ಅರಿವು ಆತ್ಮ ಮಾತ್ರ. ಇದನ್ನೇ ಯಾಜ್ಞವಲ್ಕ್ಯನು ಜನಕನಿಗೆ ಹೇಳಿಕೊಟ್ಟಿದ್ದು.

### ಆತ್ಮನೆಂದರೆ ಏನು?

ಜನಕನು ತನ್ನ ಪ್ರಶ್ನೆಗಳ ಪ್ರವಾಹವನ್ನು ಮುಂದುವರಿಸುತ್ತಾನೆ. ಅವನು ಕೇಳುತ್ತಾನೆ: ''ಆತ್ಮನೆಂದರೆ ಯಾವನು?'' ಯಾಜ್ಞವಲ್ಕ್ಯನು ಹೇಳುತ್ತಾನೆ: ''ಅಯ್ಯಾ, ಇಂದ್ರಿಯಗಳೂ ಚೈತನ್ಯಮಯವಾಗಿರುವಂತೆ ಕಂಡುಬರುತ್ತವೆ. ಆದರೆ ಹಾಗಲ್ಲ. ಆತ್ಮನೊಬ್ಬನೇ ವಿಜ್ಞಾನಮಯನು. ಚೈತನ್ಯರೂಪನು. ಅವನ ಸಂಪರ್ಕದಿಂದ ಇಂದ್ರಿಯಗಳು, ಮನಸ್ಸು ಚೈತನ್ಯದಿಂದ ತುಂಬಿ ತುಳುಕುವಂತೆ ಕಾಣುತ್ತದೆ. ಈ ಆತ್ಮವು ಬುದ್ಧಿಗೂ ಸೂಕ್ಷ್ಮವಾಗಿರುವುದು. ಬುದ್ಧಿಗೆ ಚೈತನ್ಯವನ್ನು ನೀಡುವುದು ಇದೇ.''

ಪ್ರತಿದಿನವೂ ಕಾಣುವ ಕನಸು ಮತ್ತು ಗಾಢನಿದ್ರೆಗಳ ಅನುಭವದ ಮೂಲಕ ನಾವು ಆತ್ಮನ ಅಸ್ತಿತ್ವವನ್ನು ಗುರುತಿಸಬಹುದು. ಈ ಎರಡೂ ಸ್ಥಿತಿಗಳಲ್ಲಿ ಅನುಭವಕ್ಕೆ ಬರುವುದನ್ನು ಕಂಡುಕೊಳ್ಳುವವನು ಆತ್ಮವೇ. ಹೀಗಾಗಿ ಯಾಜ್ಞವಲ್ಕ್ಯನು ಹೇಳುತ್ತಾನೆ: ''ಆತ್ಮವು ತನ್ನ ಸ್ವರೂಪವನ್ನು ಬಿಟ್ಟುಕೊಡದೆ, ಎರಡೂ ಲೋಕಗಳಲ್ಲಿ ಸಂಚರಿಸುತ್ತದೆ.'' ಎರಡು ಲೋಕಗಳು ಎಂದರೆ ಜಾಗ್ರದವಸ್ಥೆ ಮತ್ತು ಸ್ವಪ್ನಾವಸ್ಥೆ. ಸ್ವಪ್ನಾವಸ್ಥೆಯಲ್ಲಿ ಅವನು ಹೊಸ ದೇಹವನ್ನೇ ಪಡೆದುಕೊಳ್ಳುತ್ತಾನೆ. ಜಾಗ್ರದವಸ್ಥೆಯಲ್ಲಿನ ಅನುಭವಗಳ ಸಂಸ್ಕಾರವೇ ಸ್ವಪ್ನದ ಅನುಭವವನ್ನು ಮಾಡಿಸುತ್ತದೆ.

ಇನ್ನೊಂದು ಮುಖ್ಯವಾದ ಅಂಶವನ್ನು ಯಾಜ್ಞವಲ್ಕ್ಯ ಹೇಳುತ್ತಾನೆ: **'ಧ್ಯಾಯತೀವ ಲೇಲಾಯತೀವ'** – '(ಜಾಗ್ರದವಸ್ಥೆಯಲ್ಲಿ) ಚಿಂತಿಸುವವನಂತೆ, ಅಲುಗಾಡುವವನಂತೆ ಇರುತ್ತಾನೆ.' ಜಾಗ್ರದವಸ್ಥೆಯಲ್ಲಿ ಮನಸ್ಸು ಚಿಂತಿಸುತ್ತದೆ. ಆದರೆ 'ನಾನು ಚಿಂತಿಸುತ್ತಿದ್ದೇನೆ' ಎಂದು ಭಾವಿಸುತ್ತೇವೆ. ಆತ್ಮವು ಮನಸ್ಸೆನ್ನುವ ಉಪಾಧಿಯಲ್ಲಿ ತಾದಾತ್ಮ್ಯಭಾವವನ್ನು ಪಡೆದುಕೊಂಡಿದ್ದರೆ ಹಾಗೆ ಅನ್ನಿಸುತ್ತದೆ, ಅಷ್ಟೇ. ಅದೇ ರೀತಿ ದೇಹವು ಅನೇಕ ರೀತಿಯ ಚಲನೆಗಳನ್ನು ಮಾಡುತ್ತಿರುತ್ತದೆ. ಆದರೆ 'ನಾನು ಚಲಿಸುತ್ತಿದ್ದೇನೆ' ಎಂದು ಒಬ್ಬನಿಗೆ ಅನ್ನಿಸುತ್ತದೆ. ಇದಕ್ಕೆ ಕಾರಣ, ಆತ್ಮವು ದೇಹವೆಂಬ ಉಪಾಧಿಯೊಂದಿಗೆ ತಾದಾತ್ಮ್ಯ ಹೊಂದಿರುವುದು. ಈ ಉಪಾಧಿಗಳೇ ಆತ್ಮನಿಗೆ 'ಚಿಂತಿಸುತ್ತಿದ್ದೇನೆ,' 'ಅಲುಗಾಡುತ್ತಿದ್ದೇನೆ' ಎನ್ನುವ ಭ್ರಮೆಯನ್ನು ಉಂಟುಮಾಡುತ್ತದೆ.

''ಈ ಆತ್ಮವೇ ಸ್ವಪ್ನಕಾಲದಲ್ಲಿ, ಈ ಬಾಹ್ಯಲೋಕದ ಅರಿವನ್ನು ತ್ಯಜಿಸುತ್ತದೆ; ತನ್ನದೇ ಆದ ದೇಹದ ಅರಿವು ಕೂಡ ಅದಕ್ಕೆ ಇರುವುದಿಲ್ಲ. ಇವೆಲ್ಲವನ್ನೂ ಮೀರಿಹೋಗಿ ಸ್ವಪ್ನವನ್ನು ನೋಡುತ್ತದೆ'' ಎಂದು ಮುಂದುವರಿದು ಹೇಳುತ್ತಾನೆ, ಯಾಜ್ಞವಲ್ಕ್ಯ.

ಇಲ್ಲಿ ಯಾಜ್ಞವಲ್ಕ್ಯನು ತರ್ಕದ ವಿಧಾನದಿಂದ ಆತ್ಮನ ಇರುವಿಕೆಯನ್ನು ಜನಕನಿಗೆ ಮನಗಾಣಿಸುತ್ತಿದ್ದಾನೆ. ಜಾಗ್ರದವಸ್ಥೆಯನ್ನು ನೋಡುವವನು, ಸ್ವಪ್ನಾವಸ್ಥೆಯನ್ನು ನೋಡುವವನು ಬೇರೆ ಬೇರೆಯಲ್ಲ; ಒಬ್ಬನೇ. ಆ ಒಬ್ಬನು ದೇಹದಲ್ಲಿ ಅನುಭವಕ್ಕೆ ಬರುವ ದೇಹ–ಇಂದ್ರಿಯಗಳು ಹಾಗೂ ಸ್ವಪ್ನದಲ್ಲಿ ಕಾಣಬರುವ ಮನಸ್ಸಿಗಿಂತ ಭಿನ್ನನಾದವನು. ನೋಡುವವನು, ನೋಡುತ್ತಿರುವ ದೃಶ್ಯಕ್ಕಿಂತ ಬೇರೆಯಾದವನು ತಾನೆ?

ಇನ್ನು ಜನನ–ಮರಣಗಳ ಮೂಲಕ ಆತ್ಮನ ಅಸ್ತಿತ್ವವನ್ನು ಯಾಜ್ಞವಲ್ಕ್ಯನು ಪ್ರತಿಪಾದಿಸುತ್ತಾನೆ. ಹುಟ್ಟುವುದು ಎಂದರೆ ಏನು? ಇದರ ಬಗ್ಗೆ ಆಲೋಚನೆ ಮಾಡಿದ್ದೇವೆಯೆ? ಯಾಜ್ಞವಲ್ಕ್ಯನು ಹೇಳುತ್ತಾನೆ, ''ಆತ್ಮನು ಶರೀರವನ್ನು ಪಡೆದಾಗ, ಪಾಪ–ಪುಣ್ಯ, ಧರ್ಮ–ಅಧರ್ಮಗಳಿಗೆ ಕಾರಣವಾದ ಕ್ರಿಯೆಗಳ ಜೊತೆಗೆ ಕೂಡಿಕೊಳ್ಳುತ್ತಾನೆ.'' ಅಂದರೆ, ಇಂದ್ರಿಯಗಳ ಮೂಲಕ ಅಂಥ ಕಾರ್ಯ ನಡೆದರೂ, 'ನಾನು ಮಾಡುವವನು' ಎಂಬ ಭಾವ ಅವನಲ್ಲಿ ಉಂಟಾಗುತ್ತದೆ. ಇದೇ ಹುಟ್ಟು. ಯಾವಾಗ ಪುರುಷನು ಕರ್ಮಗಳನ್ನು ಮಾಡುವ ಶರೀರ ಮತ್ತು ಇಂದ್ರಿಯಗಳ ಸಂಪರ್ಕವನ್ನು ಕಡಿದುಕೊಳ್ಳುತ್ತಾನೆಯೋ ಅದನ್ನು 'ಸಾವು' ಎಂದು ಕರೆಯುತ್ತೇವೆ. ಈ ಬಗೆಯ ವಿಶ್ಲೇಷಣೆ ಕೂಡ ನಮಗೆ ಆತ್ಮವು ದೇಹ–ಇಂದ್ರಿಯಗಳಿಗಿಂತ ಬೇರೆಯಾದುದು ಎಂಬುದನ್ನು ಖಚಿತಪಡಿಸುತ್ತದೆ.

### ಆತ್ಮನು ಸ್ವಯಂಜ್ಯೋತಿ

ಯಾಜ್ಞವಲ್ಕ್ಯನು ತನ್ನ ಉಪದೇಶವನ್ನು ಮುಂದುವರಿಸುತ್ತಿದ್ದಾನೆ: ''ಈ ಪುರುಷನಿಗೆ (ಆತ್ಮಕ್ಕೆ) ಇರುವುದು ಎರಡು ಸ್ಥಾನ

ಗಳು. ಒಂದು ಜಾಗ್ರದವಸ್ಥೆ, ಇನ್ನೊಂದು ಪರಲೋಕದ ಸ್ಥಿತಿ, ಅಂದರೆ ಮುಂದಿನ ಜನ್ಮದ ಸ್ಥಿತಿ. ಸ್ವಪ್ನವು ಈ ಎರಡೂ ಅವಸ್ಥೆಗಳ ಸಂಧಿಸ್ಥಾನ. ಸ್ವಪ್ನದಲ್ಲಿ ಇದ್ದುಕೊಂಡು ಅವನು ಎರಡೂ ಸ್ಥಾನಗಳನ್ನು ನೋಡಬಲ್ಲನು.''

ಇದರರ್ಥ ಏನು? ಇಲ್ಲಿ ನೀಡಿರುವುದು ಸ್ವಪ್ನದ ಮನೋವೈಜ್ಞಾನಿಕ ವಿವರಣೆ. ಸ್ವಪ್ನವು ಉಂಟಾಗುವುದು ಈ ಲೋಕದಲ್ಲಿ ನಮಗೆ ಉಂಟಾಗುವ ಅನುಭವಗಳ ಸಂಸ್ಕಾರದಿಂದ. ಆದರೆ ಕೆಲವೊಮ್ಮೆ, ಈ ಜನ್ಮದಲ್ಲಿ ನಡೆದಿರದ ಅನುಭವಗಳೂ ಸ್ವಪ್ನದಲ್ಲಿ ಅಸ್ಪಷ್ಟವಾಗಿ ಕಾಣಬರುತ್ತವೆ. ಇದಕ್ಕೆ ಕಾರಣವೇನು? ಸ್ವಪ್ನಸ್ಥಾನದಲ್ಲಿ ಇದ್ದುಕೊಂಡು ಒಬ್ಬನು ಮುಂದಿನ ಜನ್ಮದಲ್ಲಿ ತಾನು ಏನಾಗುತ್ತಾನೋ, ಅದನ್ನು ಕೂಡ ಗ್ರಹಿಸಬಲ್ಲ. ಏಕೆಂದರೆ ಈ ಜನ್ಮದಲ್ಲಿ ಮಾಡಿದ ಕರ್ಮಗಳ ಗತಿಯೇ ಮುಂದಿನ ಜನ್ಮವನ್ನು ಕೂಡ ನಿರ್ಧರಿಸುತ್ತದೆ, ಅಲ್ಲವೇ. ಹೀಗಾಗಿ ಮುಂದಿನ ಜನ್ಮದಲ್ಲಿ ನಮಗೆ ಏನಾಗುವುದೋ, ಅದು ಈ ಜನ್ಮದಲ್ಲಿ ಮಾಡಿದ ಸಂಸ್ಕಾರಗಳ ಫಲವೇ ಆಗಿದೆ. ಅಂಥ ಸಂಸ್ಕಾರಗಳೇ, ಈ ಜನ್ಮದಲ್ಲಿ ನೋಡಿರದ ಕೆಲವು ಅನುಭವಗಳನ್ನು ನಮಗೆ ಸ್ವಪ್ನದಲ್ಲಿ ಉಂಟು ಮಾಡುತ್ತವೆ. ಈ ಅನುಭವಗಳು ಖಂಡಿತವಾಗಿ ಮುಂದಿನ ಜನ್ಮದಲ್ಲಿ ಆಗಿಯೇ ತೀರುತ್ತವೆ. ಹೀಗಾಗಿ ಮುಂದಿನ ಜನ್ಮವೊಂದು ಇದೆ ಎನ್ನುವುದನ್ನು ಸ್ವಪ್ನವು ನಮಗೆ ಸಾಬೀತು ಪಡಿಸುತ್ತದೆ.

ಇಂಥ ಸ್ವಪ್ನದಲ್ಲಿ ಆತ್ಮನು ಸ್ವಯಂಜ್ಯೋತಿಯಾಗಿರುವುದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಅಲ್ಲಿ ಹೊಸದೊಂದು ಲೋಕವೇ ಸೃಷ್ಟಿಯಾಗಿರುತ್ತದೆ. ಅದು ಎಂಥ ಲೋಕ? ಮನಸ್ಸಿನ ಲೋಕ; ಮನಸ್ಸಿನ ಸಂಸ್ಕಾರಗಳು ನಿರ್ಮಾಣ ಮಾಡಿದ ಲೋಕ. ಜಾಗ್ರದವಸ್ಥೆಯಲ್ಲಿ ಪಡೆದುಕೊಂಡ ಎಲ್ಲ ಅನುಭವಗಳ ಸಾರ ಗಟ್ಟಿಯು ಅಲ್ಲಿ ಸ್ವಪ್ನಲೋಕವಾಗಿ ಮಾರ್ಪಡುತ್ತದೆ. ಅದನ್ನು ನಿರ್ಮಾಣ ಮಾಡಿಕೊಳ್ಳುವವನು ಯಾರು? ಮನಸ್ಸಿನ ಜೊತೆಗೆ ತಾದಾತ್ಮ್ಯಗೊಂಡು, ತಾನೇ ಮನಸ್ಸು ಎಂದು ಭಾವಿಸಿಕೊಂಡಿರುವ ಮನೋಮಯ ಆತ್ಮ. ಅವನು ಯಾವ ಬೆಳಕಿನಿಂದ ಈ ಸ್ವಪ್ನಪ್ರಪಂಚವನ್ನು ನೋಡುತ್ತಾನೆ? ಅಲ್ಲಿ ಜಾಗ್ರದವಸ್ಥೆಯಂತೆ ಬೇರೆ ಯಾವ ಬಾಹ್ಯಜ್ಯೋತಿಗಳು ಕೂಡ ಇಲ್ಲ. ಅಲ್ಲಿರುವುದು ಒಂದೇ ಬೆಳಕು. ಅದೇ ಆತ್ಮನ ಬೆಳಕು. ದೃಶ್ಯ-ದೃಕ್, ನೋಡುವುದು-ನೋಡುವವನು ಎಂಬ ಖಚಿತ ವಿಭಾಗವು ಅಲ್ಲಿ ಉಂಟಾಗುವುದನ್ನು ನಾವು ಕಾಣುತ್ತೇವೆ. ಇಂಥ ವಿಭಾಗವನ್ನು ನಾವು ಜಾಗ್ರದವಸ್ಥೆಯ ವಿಶ್ಲೇಷಣೆಯಲ್ಲಿ ಮಾಡಲು ಆಗದು. ಏಕೆಂದರೆ ಅದರ ಅನುಭವವು ಬಹಳ ಸಂಕೀರ್ಣವಾಗಿರುತ್ತದೆ. ಬಾಹ್ಯ ವಿಷಯಗಳ ಅನುಭವ, ಮನಸ್ಸು ತನಗೆ ತಾನೇ ಮಾಡಿಕೊಳ್ಳುವ ಅನುಭವ — ಇವೆಲ್ಲ ಬೆರೆತಿರುತವೆ. ಅಂಥ ಸಂಕೀರ್ಣತೆ ಸ್ವಪ್ನಾವಸ್ಥೆಯಲ್ಲಿ ಕಾಣಬರುವುದಿಲ್ಲ.

ಈ ಸ್ಪಷ್ಟ ವಿಭಾಗದಿಂದ ನಮಗೆ ತಿಳಿದುಬರುವುದಾದರೂ ಏನು? ಆತ್ಮವು ಮನಸ್ಸಿಗಿಂತಲೂ ಭಿನ್ನವಾದುದು ಎಂದು. ದೃಶ್ಯವು ಮನಸ್ಸಿನ ಸೃಷ್ಟಿಯಷ್ಟೇ. ಅದು ಭ್ರಮೆ ಮಾತ್ರ. ಹಾಗಾದರೆ ಪಾರಮಾರ್ಥಿಕವಾಗಿ ಇರುವುದು ದೃಗ್ವಸ್ತುವಾದ ಆತ್ಮ ಮಾತ್ರ. ಇದೇ ದೃಶ್ಯವಾಗಿಯೂ ಕಾಣಿಸುತ್ತದೆ; ದೃಕ್ ಆಗಿಯೂ ಕಾಣಿಸುತ್ತದೆ. ಆದರೆ ಈ ಎರಡು ಭಿನ್ನತೆಗಳ ಭಾವಕ್ಕಿಂತ ಮೀರಿರುವ ಅದ್ವೈತ ವಸ್ತು ಅದು. ಅಂಥ ಸ್ವಯಂಜ್ಯೋತಿಯನ್ನು ಸ್ಪಷ್ಟವಾಗಿ ವಿಭಾಗಿಸಿ ಸ್ವಪ್ನದಲ್ಲಿ ಮಾತ್ರವೇ ನಾವು ತಿಳಿದುಕೊಳ್ಳಬಹುದು. ಹೀಗಾಗಿ ಉಪನಿಷತ್ತು ಹೇಳುತ್ತದೆ: '**ಅತ್ರಾಯಂ ಪುರುಷಃ ಸ್ವಯಂಜ್ಯೋತಿಃ ಭವತಿ**' ಎಂದು. ಇಲ್ಲಿ ಅಂದರೆ ಈ ಸ್ವಪ್ನಸ್ಥಿತಿಯಲ್ಲಿ ಆತ್ಮವು ಸ್ವಯಂಜ್ಯೋತಿಯಾಗಿ ಕಂಡುಬರುತ್ತದೆ.

### ಸ್ವಪ್ನ ಪ್ರಪಂಚ

ಈ ಸ್ವಪ್ನದಲ್ಲಿ ಆತ್ಮವು ಹುಟ್ಟಿಸಿಕೊಳ್ಳುವ ಲೋಕವಾದರೂ ಹೇಗೆ ಇರುತ್ತದೆ? ಇದರ ಚಿತ್ರಮಯ ವರ್ಣನೆಯನ್ನು ಯಾಜ್ಞವಲ್ಕ್ಯನು ನೀಡುತ್ತಾನೆ: ''ಅಲ್ಲಿ ರಥಗಳು ಇರುವುದಿಲ್ಲ. ರಥವನ್ನು ಕುದುರೆಗೆ ಕಟ್ಟುವ ನೊಗವೂ ಇರುವುದಿಲ್ಲ. ಅಲ್ಲಿ ದಾರಿಯೂ ಇರುವುದಿಲ್ಲ. ಆದರೂ ಪುರುಷನು ಮನಸ್ಸಿನ ಉಪಾಧಿಯ ಮೂಲಕ ರಥಗಳನ್ನು ನಿರ್ಮಿಸಿಕೊಳ್ಳುತ್ತಾನೆ; ನೊಗವನ್ನೂ ನಿರ್ಮಿಸಿಕೊಳ್ಳುತ್ತಾನೆ; ದಾರಿಯನ್ನೂ ನಿರ್ಮಿಸಿಕೊಳ್ಳುತ್ತಾನೆ. ಆ ಸ್ವಪ್ನಪ್ರಪಂಚದಲ್ಲಿ, ನಿಜವಾಗಿ ನೋಡಿದರೆ, ಜಾಗ್ರದವಸ್ಥೆಯಲ್ಲಿ ಅನುಭವಿಸುವ ಆನಂದ, ಹರ್ಷಗಳ ಅನುಭವ ಇರುವುದಿಲ್ಲ. ಆದರೂ ಅಲ್ಲಿ ಅವೆಲ್ಲವನ್ನೂ ಮನಸ್ಸು ಸೃಷ್ಟಿಸಿಕೊಳ್ಳುತ್ತದೆ. ಅದರ ಜೊತೆಗೆ ಆತ್ಮನು ತಾದಾತ್ಮ್ಯ ಹೊಂದಿರುವುದರಿಂದ 'ನಾನೇ ಹರ್ಷಪಡುತ್ತಿದ್ದೇನೆ' ಎಂದುಕೊಳ್ಳುತ್ತಾನೆ. ಅಲ್ಲಿ ಕೆರೆಗಳಾಗಲಿ, ಕಟ್ಟೆಗಳಾಗಲಿ, ಬಾವಿಗಳಾಗಲಿ, ನದಿಗಳಾಗಲಿ ಇರುವುದಿಲ್ಲ. ಆದರೆ ಅಲ್ಲಿ ಅವನು ಕೆರೆ, ಕಟ್ಟೆ, ಬಾವಿಗಳನ್ನು ತಾನೇ ಸೃಷ್ಟಿಕೊಳ್ಳುತ್ತಾನೆ.''

ಇಷ್ಟನ್ನು ಹೇಳಿ, ಒಂದು ಸ್ವಾರಸ್ಯವಾದ ಉದ್ಗಾರವನ್ನು ಯಾಜ್ಞವಲ್ಕ್ಯನು ಮಾಡುತ್ತಾನೆ: ''ಅವನೇ ಕರ್ತೃವಲ್ಲವೆ?'' ಎಂದು. ಆತ್ಮನೇ ಕರ್ತೃವಾಗಿ ಬಿಟ್ಟಿದ್ದಾನೆ ಎಂದು ಇದರ ಹೊರ ಅರ್ಥ. ಆತ್ಮವು ಹೇಗೆ ತಾನೇ ಕರ್ತೃವಾಗಬಲ್ಲುದು? ಕರ್ತೃತ್ವ ಭಾವನೆ ಇರುವುದು ಮನಸ್ಸಿನಲ್ಲಿ. ಆತ್ಮವು ಮನಸ್ಸಿನ ಜೊತೆಗೆ ತಾದಾತ್ಮ್ಯಗೊಂಡಾಗ 'ನಾನು ಒಬ್ಬ ಕರ್ತೃ' ಎಂದುಕೊಳ್ಳುತ್ತದೆ. ಇದು ಹೇಗೆ ಹೇಳುತ್ತೀರಿ ಎಂದರೆ, ಮುಂದೆ ಸುಷುಪ್ತಿಯ ಬಗ್ಗೆ ಹೇಳುವಾಗ, ಕರ್ತೃತ್ವ, ಭೋಕ್ತೃತ್ವ ಭಾವನೆಗಳನ್ನು ಇವನು ಮೀರಿ ಹೋಗುತ್ತಾನೆ ಎಂದು ಉಪನಿಷತ್ತೇ ಘೋಷಿಸುತ್ತದೆ. ಹೀಗಾಗಿ ಇಲ್ಲಿ ಕರ್ತೃತ್ವವೆಂಬುದು ಮನಸ್ಸೆಂಬ ಉಪಾಧಿಯಿಂದ ಜನಿತವಾದದ್ದು ಎಂದು ಅರ್ಥಮಾಡಿಕೊಳ್ಳಬೇಕು.

''ಈ ಆತ್ಮನು ಚೈತನ್ಯದ ಬೆಳಕಿನವನು. ಏಕಮೇವಾದ್ವಿತೀಯನು. ಅವನು ಸ್ವಪ್ನದಲ್ಲಿ ಇರುವಾಗ, ಜಾಗ್ರದವಸ್ಥೆಯಲ್ಲಿ ಅನುಭವಕ್ಕೆ ಬರುವ ಶರೀರವನ್ನು ಬದಿಗಿಡುತ್ತಾನೆ. ಆ ಶರೀರವು ನಿಶ್ಚೇತನವಾಗಿ ಬಿದ್ದಿರುತ್ತದೆ. ಆದರೆ ಇಂದ್ರಿಯಗಳ ಅನುಭವದ

ಸಾರವಾದ ಸಂಸ್ಕಾರಗಳನ್ನು ಮಾತ್ರ ತೆಗೆದುಕೊಂಡು ಅವನು ಸ್ವಪ್ನಾವಸ್ಥೆಯನ್ನು ಪಡೆದುಕೊಳ್ಳುತ್ತಾನೆ. ಅಲ್ಲಿ ಸ್ವಪ್ನಪ್ರಪಂಚವನ್ನು ಉಂಟುಮಾಡಿರುವ ಮನಸ್ಸು ಮಾತ್ರ ಎಚ್ಚೆತ್ತಿರುತ್ತದೆ. ಉಳಿದ ವೆಲ್ಲವೂ, ಅಂದರೆ ದೇಹ, ಇಂದ್ರಿಯಗಳು ನಿಶ್ಚೇತನವಾಗಿ ಬಿದ್ದುಕೊಂಡಿರುತ್ತವೆ. ಹೀಗೆ ಆತ್ಮವು ತಾನು ಎಚ್ಚರವಾಗಿದ್ದು ಕೊಂಡು, ಮಲಗಿದಂತೆ ಇರುವ ಉಳಿದವುಗಳನ್ನೆಲ್ಲ ಬೆಳಗುತ್ತಿರುತ್ತಾನೆ. ಮತ್ತೆ ತನ್ನ ಹಿಂದಿನ ಸ್ಥಾನವಾದ ಜಾಗ್ರದವಸ್ಥೆಯನ್ನೇ ಬಂದು ಸೇರುತ್ತಾನೆ.''

ಒಬ್ಬನಿಗೆ ನಿರ್ದಿಷ್ಟವಾದ ಕನಸುಗಳೇ ಉಂಟಾಗುವುದು ಹೇಗೆ? ಇದಕ್ಕೆ ಉತ್ತರವನ್ನು ಯಾಜ್ಞವಲ್ಕ್ಯನು ಮುಂದೆ ನೀಡುತ್ತಾನೆ: ಬೇರೆ ಎಲ್ಲವೂ ಸತ್ತಂತೆ ನಿಶ್ಚೇತನವಾಗಿ ಬಿದ್ದುಕೊಂಡಿರುವಾಗ ಮನಸ್ಸು, ಪ್ರಾಣಗಳು ಮಾತ್ರವೇ ಆ ಸ್ಥಿತಿಯಲ್ಲಿ ಎಚ್ಚರವಾಗಿರುತ್ತವೆ. ಇದನ್ನು ಕಾವ್ಯಾತ್ಮಕವಾಗಿ ಉಪನಿಷತ್ತು ಹೀಗೆ ಬಣ್ಣಿಸುತ್ತದೆ: ''ಆತ್ಮನು ಪ್ರಾಣದ ಮೂಲಕ ದೇಹವೆಂಬ ಈ ಕೀಳುಗೂಡನ್ನು ರಕ್ಷಿಸಿಕೊಳ್ಳುತ್ತಾನೆ. ಆದರೆ ತಾನು ಮಾತ್ರ, ಮನಸ್ಸಿನ ಒಡಗೂಡಿ ಸ್ವಪ್ನ ಪ್ರಪಂಚವನ್ನು ನಿರ್ಮಿಸಿಕೊಂಡು ಎಲ್ಲಿಗೋ ಹೋಗಿಬಿಡುತ್ತಾನೆ.'' ಎಲ್ಲಿಗೆ ಹೋಗುತ್ತಾನೆ? ''ಯಾವುದನ್ನು ತಾನು ಆಸೆಪಡುತ್ತಾನೆಯೋ, ಅಲ್ಲಿಗೆ ಹೋಗಿಬಿಡುತ್ತಾನೆ.'' ಇದರಿಂದ ನಮಗೆ ಸ್ಪಷ್ಟವಾಗುತ್ತದೆ. ಕನಸುಗಳು ಉಂಟಾಗುವುದು ನಮ್ಮ ಕಾಮನೆಗಳಿಂದ. ಸ್ವಪ್ನಾವಸ್ಥೆಯಲ್ಲಿ ನಮಗೆ ಕಾಣುವುದು ನಮ್ಮ ಕಾಮನೆಗಳ, ಆಸೆಗಳ ಪ್ರತಿಬಿಂಬರೂಪವಾದ ಭ್ರಮಾ ಪ್ರಪಂಚ ಮಾತ್ರ ಎಂದು.

ನಮ್ಮ ಕಾಮನೆಗಳಂತೆ ನಮಗೆ ಉಂಟಾಗುವ ಕನಸುಗಳು ಇರುತ್ತವೆ. ಇದನ್ನು ದೃಷ್ಟಾಂತಪೂರ್ವಕವಾಗಿ ಯಾಜ್ಞವಲ್ಕ್ಯನು ಬಣ್ಣಿಸುತ್ತಾನೆ: ''ಸ್ವಪ್ನದಲ್ಲಿ ಉನ್ನತ ಅನುಭವಗಳೂ ಆಗುತ್ತವೆ; ಕೀಳು ಅನುಭವಗಳು ಕೂಡ ಆಗುತ್ತವೆ. ಮನಸ್ಸಿನೊಡನೆ ಕೂಡಿಕೊಂಡಿರುವ ಈ ಆತ್ಮವು ತಾನೇ ಬಹುರೂಪಗಳನ್ನು ಸೃಷ್ಟಿಮಾಡಿಕೊಳ್ಳುತ್ತದೆ. ಸ್ತ್ರೀಯರೊಂದಿಗೆ ಸಂತೋಷವಾಗಿರುವುದು, ನಗುತ್ತ ಇರುವುದು, ಭಯವನ್ನು ಉಂಟುಮಾಡುವ ಹುಲಿ ಮುಂತಾದವನ್ನು ಕಾಣುವುದು — ಇವೆಲ್ಲವೂ ಮನಸ್ಸಿನ ಭ್ರಮೆಯಲ್ಲದೆ ಬೇರಲ್ಲ.''

ಜಗತ್ತಿನಲ್ಲಿ ಉಂಟಾಗುವ ಸಾಧಾರಣ ಅನುಭವದಿಂದಲೂ ನಾವಿದನ್ನು ಅರ್ಥಮಾಡಿಕೊಳ್ಳಬಹುದು. ಜಗತ್ತಿನಲ್ಲಿ ಜನರು ಒಬ್ಬನು ಅನಾಯಾಸವಾಗಿ ಮಲಗಿದ್ದಾನೆ ಎನ್ನುವುದನ್ನು ಮಾತ್ರ ಕಾಣುತ್ತಾರೆ. ದೇಹಾದಿಗಳು ನಿಶ್ಚೇತನವಾಗಿದ್ದರೂ ಚೈತನ್ಯವು ಅಲ್ಲಿ ಇದ್ದೇ ಇರುತ್ತದೆ. ಅವನು ಯಾರು ಎಂದು ತಿಳಿದುಕೊಳ್ಳುವ ಅರ್ಹತೆ ಅವರಿಗೆ ಇರುವುದಿಲ್ಲ. ಜಗತ್ತಿನಲ್ಲಿ ಕಾಣಬರುವ ಸಾಧಾರಣ ಭಾವನೆ ಏನು? ಯಾರು ಎಚ್ಚರದ ಜಗತ್ತನ್ನು ಕಾಣುತ್ತಾನೆಯೋ ಅವನೇ ಸ್ವಪ್ನವನ್ನೂ ಕಾಣುತ್ತಾನೆ ಎಂದು. ಅವನ ನಿಜವಾದ ಸ್ವರೂಪ ಏನು ಎಂದು ಸಾಧಾರಣ ಜನರು ಅರಿಯರು. ಹೀಗೆ ಲೋಕರೂಢಿಯ ಅನುಭವದಿಂದಲೂ ಆತ್ಮವು ದೇಹ-ಇಂದ್ರಿಯಗಳಿಗಿಂತ ಭಿನ್ನವಾದುದು ಎಂದು ಸಾಬೀತಾಗುತ್ತದೆ. ಉಪನಿಷತ್ತು ಹೇಳುತ್ತದೆ, ಸ್ವಪ್ನದಲ್ಲಿ ''ಆತ್ಮವು ಸ್ವಯಂಜ್ಯೋತಿಯಾಗಿ ಕಾಣಿಸಿಕೊಳ್ಳುತ್ತದೆ.'' ಇದರ ಅರಿವು ಸಾಧಾರಣ ಜನರಿಗೆ ಬರುವುದಿಲ್ಲ.

ಪುರುಷನು ಸ್ವಪ್ನದ ಅನುಭವವನ್ನು ಪಡೆದುಕೊಂಡು ಸುಷುಪ್ತಿಯ ಸ್ಥಿತಿಗೆ ಏರುತ್ತಾನೆ. ಉಪನಿಷತ್ತು ಸುಷುಪ್ತಿಯನ್ನು 'ಸಂಪ್ರಸಾದ ಸ್ಥಿತಿ' ಎಂದು ಕರೆಯುತ್ತದೆ. ಎಚ್ಚರದಲ್ಲಿ ನೂರಾರು ಚಟುವಟಿಕೆಗಳು, ವ್ಯಾಪಾರಗಳು. ದೇಹ-ಇಂದ್ರಿಯಗಳ ಸಂಪರ್ಕದಿಂದ ಆಗುವ ದೋಷಗಳು. ಇವೆಲ್ಲದರಿಂದ ಪುರುಷನು ಬಿಡುಗಡೆಯನ್ನು ಪಡೆದು, ಸ್ವಪ್ನ ಸ್ಥಿತಿಗೆ ಏರುತ್ತಾನೆ. ಸ್ವಪ್ನದಲ್ಲಿಯೂ ಮಾನಸಿಕ ಸಂಸ್ಕಾರಗಳ ಪರಿಣಾಮವಾಗಿ ಹಲವು ಒಳ್ಳೆಯ ಅಥವಾ ಕೆಟ್ಟ ಅನುಭವಗಳನ್ನು ಪಡೆದುಕೊಂಡು ನಿತ್ರಾಣನಾಗಿರುತ್ತಾನೆ. ಅವನು ನಿಜವಾಗಲೂ ಅನಾಯಾಸ ಸ್ಥಿತಿಯನ್ನು ಹೊಂದುವುದು ಸುಷುಪ್ತಿ ಯಲ್ಲಿ ಮಾತ್ರ. ಅವನು ಅಲ್ಲಿ ಚೆನ್ನಾಗಿರುವ ಪ್ರಸಾದವನ್ನು (ಸಂತೋಷ, ನೆಮ್ಮದಿ) ಹೊಂದುತ್ತಾನೆ. ಹೀಗಾಗಿ ಸುಷುಪ್ತಿಯ ಸ್ಥಿತಿಯನ್ನು ಸಂಪ್ರಸಾದ ಎಂದು ಕರೆಯಲಾಗಿದೆ. ಸುಷುಪ್ತಿಯಲ್ಲಿ ಸ್ವಲ್ಪಕಾಲವಿದ್ದು, ಪುರುಷನು ಮತ್ತೆ ಸ್ವಪ್ನದ ಸ್ಥಿತಿಗೇ ಬರುತ್ತಾನೆ.

ಈಗ ಯಾಜ್ಞವಲ್ಕ್ಯನು ಬಹು ಮುಖ್ಯವಾದ ಉಪದೇಶವನ್ನು ಮಾಡುತ್ತಾನೆ: **'ಸ ಯತ್ ತತ್ರ ಪಶ್ಯತಿ, ಅನನ್ವಾಗತಃ ತೇನ ಪಶ್ಯತಿ; ಅಸಂಗೋ ಹಿ ಅಯಂ ಪುರುಷಃ'** - ಪುರುಷನು ಸ್ವಪ್ನದಲ್ಲಾಗಲಿ, ಸುಷುಪ್ತಿ ಅವಸ್ಥೆಯಲ್ಲಾಗಲಿ, ಏನನ್ನು ನೋಡುತ್ತಾನೆಯೋ, ಏನನ್ನು ಅನುಭವಿಸುತ್ತಾನೆಯೋ, ಅವುಗಳಿಗೆ ಅಂಟಿಕೊಂಡಿರುವುದಿಲ್ಲ. ಕರ್ತೃತ್ವ ಭಾವನೆ ಅವನಲ್ಲಿ ಇರುವುದೇ ಇಲ್ಲ. ಏಕೆಂದರೆ ಆತ್ಮನ ನಿಜವಾದ ಸ್ವರೂಪವೇ ಅಸಂಗ. ಅವನಿಗೆ ಯಾವುದರಲ್ಲಿಯೂ ಸಂಗವಿರುವುದಿಲ್ಲ. ಹೀಗಾಗಿ ಅವನು ಅಸಂಗನು. ಅಸಂಗನಾಗಿರುವ ವಸ್ತುವು ಮಾರ್ಪಾಡಾಗುವುದೇ ಇಲ್ಲ. ಅಮೃತಸ್ವಭಾವ ಅದಕ್ಕೆ ಸಹಜವಾಗಿಯೇ ಇರುತ್ತದೆ. ಹೀಗಾಗಿ ಅವನು ಅಮೃತನು.

### ಸಹಸ್ರವನ್ನು ಕೊಡುತ್ತೇನೆ

ಈ ಹಂತದಲ್ಲಿ ಜನಕನಿಗೆ ಬಹಳ ಸಂತೋಷವಾಗುತ್ತದೆ. ''ಭಗವನ್ ನಾನು ಸಹಸ್ರವನ್ನು ಕೊಡುತ್ತೇನೆ. ದಯವಿಟ್ಟು ನಿಮ್ಮ ಉಪದೇಶವನ್ನು ಇಲ್ಲಿಗೇ ನಿಲ್ಲಿಸಬೇಡಿ, ಮುಂದುವರೆಸಿರಿ. ನಾನು ಮೋಕ್ಷವನ್ನು ಪಡೆಯುವವರೆಗೂ ನೀವು ಉಪದೇಶವನ್ನು ನಿಲ್ಲಿಸಬಾರದು'' ಎಂದು ಕೇಳಿಕೊಳ್ಳುತ್ತಾನೆ. ಇಲ್ಲಿ ಸಹಸ್ರವೆಂದರೆ ಸಾವಿರ ಗೋವುಗಳಾಗಬಹುದು, ಇಲ್ಲವೇ ಸಾವಿರ ಚಿನ್ನದ ವರಹಗಳಾಗಬಹುದು. ಏನೇ ಇರಲಿ ಬ್ರಹ್ಮವಿದ್ಯೆಗೆ ಬೆಲೆ ಕಟ್ಟಲಾಗದು, ಅಲ್ಲವೆ?

ಈ ಸಂಭಾಷಣೆ ಇನ್ನೂ ಮುಂದುವರಿಯುವುದು. ಜನಕನನ್ನು ಯಾಜ್ಞವಲ್ಕ್ಯನು ಮೋಕ್ಷದ ತನಕ ಕರೆದುಕೊಂಡು ಹೋಗುವನು. ಅದು ಹೇಗೆ ಎನ್ನುವುದನ್ನು ಮುಂದಿನ ಭಾಗದಲ್ಲಿ ನೋಡೋಣ. ❖